# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಬೇಲೂರು.

**ಸಿ ಸಿ ನಂಃ88/2018**

| | | |
|---|---|---|
| ಹೆಸರು | ಈರಯ್ಯ | ದಿಃ **15-09-2023** |
| ತಂದೆ ಹೆಸರು | ದೊಡ್ಡಯ್ಯ | |
| ವಯಸ್ಸು | 60 ವರ್ಷ | ಪಿಡಬ್ಲ್ಯುಃ **3** |
| ಉದ್ಯೋಗ | ವ್ಯವಸಾಯ | ಸಿಡಬ್ಲ್ಯುಃ **2** |
| ವಾಸ | ಹಲ್ಮಿಡಿ | ವಿಧಿ ಬದ್ಧವಾಗಿ ಪ್ರಮಾಣೀಕರಿಸಲಾಯಿತು. |

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

–

ನನಗೆ ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯ ಪರಿಚಯ ಇರುತ್ತದೆ. ನನಗೆ ಚಾಸಾ-**1** ರವರ ಪರಿಚಯ ಇರುವುದಿಲ್ಲ.

ಈಗ ತೋರಿಸಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-**1**(ಸಿ) ಎಂದು ಗುರ್ತಿಸಲಾಯಿತು.

ಈಗ ತೋರಿಸಿರುವ ಮತ್ತೊಂದು ದಾಖಲೆಯನ್ನು ತೋರಿದ್ದು ಸದರಿ ದಾಖಲೆ ಮಾದರಿ ಸೀಲಿನ ನಕಲು ಆಗಿದ್ದು ಅದನ್ನು ನಿಪಿ-**2** ಎಂದು ಈಗಾಗಲೇ ಗುರ್ತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-**2**(ಬಿ) ಎಂದು ಗುರ್ತಿಸಲಾಯಿತು.

ನಿಪಿ-**1** ಮತ್ತು **2** ರಲ್ಲಿರುವ ಸಹಿಗಳನ್ನು ಬೇಲೂರಿನ ಬಸ್ ನಿಲ್ದಾಣದ ಬಳಿ **4-5** ವರ್ಷಗಳ ಹಿಂದೆ ಮಾಡಿರುತ್ತೇನೆ.

ನಿಪಿ-**1** ಮತ್ತು **2** ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ತೋರಿಸಿದ ಎರಡು ಪ್ಲಾಸ್ಟಿಕ್ ಬಾಟಲ್ ಗಳನ್ನು ನೋಡಿ ಗುರ್ತಿಸಿರುವುದಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)**

## ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ **13-04-2017** ರಂದು ಬೆಃ **9.00** ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು, ಸಿಬ್ಬಂದಿಯೊಂದಿಗೆ ಹಲ್ಮಿಡಿ ಗ್ರಾಮಕ್ಕೆ ಬಂದು ಅಲ್ಲೆ ರಸ್ತೆ ಬದಿಯಲ್ಲಿ ನಿಂತಿದ್ದ ನನ್ನನ್ನು ಮತ್ತು ಚಾಸಾ-**1** ರವರನ್ನು ಕರೆದು ಬಂದ ಮಾಹಿತಿಯನ್ನು ತಿಳಿಸಿ, ನನ್ನನ್ನು ಹಾಗೂ ಚಾಸಾ-**1** ರವರನ್ನು ದಾಳಿ

ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅದಕ್ಕೆ ನಾವು ಒಪ್ಪಿ ಆರೋಪಿಯ ಮನೆಯ ಹತ್ತಿರ ಹೋದೆವು ಎಂದರೆ ಸರಿಯಲ್ಲ. ಮನೆಯ ಹತ್ತಿರ ಹೋಗಿ ಮನೆಯಲ್ಲಿ ಇದ್ದರವರನ್ನು ಕೂಗಿ ಕರೆದು ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿ ಮಾಡಲು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ಮನೆಯನ್ನು ಶೋಧನೆ ಮಾಡಿದಾಗ ಮನೆಯಲ್ಲಿ 5 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ 5 ಲೀ ನಷ್ಟು ಕಳ್ಳಭಟ್ಟಿ ಸಾರಾಯಿ ಹಾಗೂ 15 ಲೀ ಸಾಮಾರ್ಥ್ಯದ 2 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ನಂತೆ ಒಟ್ಟು 30 ಲೀ ನಷ್ಟು ಬೆಲ್ಲದ ಕೊಳೆ ಇರುವುದು ಕಂಡು ಬಂತು ಎಂದರೆ ಸರಿಯಲ್ಲ. ಹಾಜರಿದ್ದ ಮಹಿಳೆಯನ್ನು ಕೇಳಲಾಗಿ ತನಗೆ ಸೇರಿದ್ದು ಎಂದು ಹೇಳಿದ್ದು ಹಾಗೂ ಆಕೆಯ ಹೆಸರು ಸುಮಿತ್ರ ಕೋಂ ರವಿ ಹಲ್ಮಿಡಿ ಗ್ರಾಮ ಎಂದು ತಿಳಿಸಿದರು ಎಂದರೆ ಸರಿಯಲ್ಲ. ನಂತರ ದೊರೆತ ಮುದ್ದೆಮಾಲುಗಳ ಪೈಕಿ ಎಫ್ ಎಸ್ ಎಲ್ ಗಾಗಿ ಬೆಲ್ಲದ ಕೊಳೆಯಿಂದ 500 ಎಂ ಎಲ್ ನ ಪ್ಲಾಸ್ಟಿಕ್ ಬಾಟಲಿಯಲ್ಲಿ 500 ಎಂ ಎಲ್ ನಷ್ಟು ಬೆಲ್ಲದ ಕೊಳೆ ಹಾಗೂ 500 ಎಂ ಎಲ್ ಸಾಮರ್ಥ್ಯದ 1 ಬಾಟಲಿಯಲ್ಲಿ 500 ಎಂ ಎಲ್ ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಮಾದರಿಗೆ ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿ ಇಲಾಖಾ ಸೀಲು ಹಾಕಲಾಯಿತು ಎಂದರೆ ಸರಿಯಲ್ಲ. ನಂತರ ದೊರೆತ ಸ್ವತ್ತುಗಳನ್ನು ನನ್ನ ಹಾಗೂ ಚಾಸಾ-1 ರವರ ಸಮಕ್ಷಮ ಬೆಃ9.10 ರಿಂದ 10.30 ಗಂಟೆಯವರೆಗೆ ನಿಪಿ-1 ರಂತೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಕ್ಕೆ ನಾನು ಸ್ಥಳದಲ್ಲೆ ಓದಿ ನೋಡಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರ ವಿಷಯಗಳು ತಿಳಿದಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ/ಗಳ ಪರ ವಕೀಲರಾದ ಶ್ರೀ ಬಿ ಎಸ್ ಜಿ ರವರಿಂದಃ**

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ಸಲ್ಲಿಸುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.